ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಭಾಂಗಣದಲ್ಲಿ ದಿನಾಂಕ 21-4-2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಒಂಭತ್ತನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಎಂ.ವಿ. ಗುತ್ತೇದಾರ | ಸದಸ್ಯರು |
| 3. | ಶ್ರೀ ಅಲ್ಲಮಪ್ರಭು ಪಾಟೀಲ | ಸದಸ್ಯರು |
| 4. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 5. | ಶ್ರೀ ಭೋಜನಗೌಡ | ಸದಸ್ಯರು |
| 6. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 7. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 8. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |
| 9. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 10. | ಡಾ. ಅಮ್ರಿಕ್ ಸಿಂಘ್ ಸಿದ್ದು | ಸದಸ್ಯರು |
| 11. | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 12. | ಡಾ. ಪಿ. ಬಾಲಕೃಷ್ಣನ್ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಒಂಭತ್ತನೇಯ ಸಭೆಗೆ ಸರ್ವಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯಸೂಚಿಯ ವಿಷಯವಾರು ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಂಟನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದನ್ನು ಚರ್ಚಿಸುವ ಸಂದರ್ಭದಲ್ಲಿ, ಮಾನ್ಯ ಸದಸ್ಯರಾದ ಶ್ರೀ ಎಂ.ವಿ. ಗುತ್ತೇದಾರ ಅವರು ಕೆಲವೊಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ ವಿಷಯವನ್ನು ಚರ್ಚಿಸುತ್ತಾ ಅದರಲ್ಲಿ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಏಕ ಪಕ್ಷೀಯವಾಗಿ ತೀರ್ಮಾನ ಕೈಗೊಳ್ಳುತ್ತಾರೆ ಹಾಗೂ ಸದಸ್ಯರುಗಳ ಕೆಲವೊಂದು ತೀರ್ಮಾನಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಮತ್ತು ಕಾರ್ಯರೂಪಕ್ಕೆ ತರುವುದಿಲ್ಲ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ಈ ವಿಷಯಕ್ಕೆ ಉತ್ತರಿಸುತ್ತಾ, ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ವಿಶ್ವವಿದ್ಯಾಲಯದ ಅಧಿಕಾರಿಗಳವರೊಂದಿಗೆ ಸಮಾಲೋಚಿಸಿ ನಿಯಮಾನುಸಾರ ಎಲ್ಲಾ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗಿದೆಯೆಂದು ತಿಳಿಸಿದರು. ಮಾನ್ಯ ಸದಸ್ಯರುಗಳು ಒಂದು ವೇಳೆ ಈ ಕುರಿತು ಆಪೇಕ್ಷಿಸಿದ್ದಲ್ಲಿ, ಯಾವ ತರಹದ ಕಾರ್ಯಚಟುವಟಿಕೆಗಳನ್ನು ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ನಿರ್ಣಯಿಸಲಾರದೆ ಕೈಗೊಳ್ಳಲಾಗಿದಯೆಂದು ಬರವಣಿಗೆಯ ರೂಪದಲ್ಲಿ ದಿನಾಂಕ 19-5-2012 ರಂದು ನಿಗದಿಪಡಿಸಿದ ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಗಿಂತ ಒಂದು ವಾರ ಮುಂಚಿತವಾಗಿ ತಿಳಿಸಲು ಸಹ ಅಧ್ಯಕ್ಷರು ಸಲಹೆ ನೀಡಿದರು, ಇದಕ್ಕೆ ಎಲ್ಲಾ ಸದಸ್ಯರುಗಳು ಒಪ್ಪಿಗೆಯನ್ನು ಸೂಚಿಸಿದರು. ಮಾನ್ಯ ಸದಸ್ಯರುಗಳ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸದರಿ ಸಭೆಯಲ್ಲಿ ಚರ್ಚೆಗೆ ಕೈಗೊತ್ತಿಕೊಳ್ಳಲಾಗುವುದು.

ಮುಂದುವರೆದು, ಕಾರ್ಯನಿರ್ವಾಹಕ ಅಭಿಯಂತರ (ಸಿವಿಲ್) ರ ನೇಮಕಾತಿ ಕುರಿತಾದ ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರ ಆಕ್ಷೇಪಣೆಗೆ ಅಧ್ಯಕ್ಷರು ಉತ್ತರಿಸುತ್ತಾ, ಕೃಷಿ ವಿಶ್ವವಿದ್ಯಾಲಯ ಧಾರವಾಡದ ಈ ಪ್ರಕರಣವು ನ್ಯಾಯಾಲಯದ ಮುಂದಿದ್ದು, ಕೃಷಿ ವಿಶ್ವವಿದ್ಯಾಲಯ ರಾಯಚೂರು ಕಾರ್ಯನಿರ್ವಾಹಕ ಅಭಿಯಂತರ (ಸಿವಿಲ್) ಹಾಗೂ ಕಾರ್ಯನಿರ್ವಾಹಕ ಅಭಿಯಂತರ (ಕೃಷಿ) ಯ ಎರಡು ಹುದ್ದೆಗಳು ಹೊಂದಿರುತ್ತದೆ, ಮೇಲಿನ ಕಾರಣದಿಂದಾಗಿ

ಕಾರ್ಯನಿರ್ವಾಹಕ ಅಭಿಯಂತರ (ಕೃಷಿ) ಹುದ್ದೆಯನ್ನು ಕಾರ್ಯನಿರ್ವಾಹಕ ಅಭಿಯಂತರ (ಸಿವಿಲ್) ಎಂದು ಪರಿವರ್ತಿಸಿ ವಿಶ್ವವಿದ್ಯಾಲಯದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅತ್ಯವಶ್ಯವಿದ್ದುದರಿಂದ ಶ್ರೀ ರವಿ ಆರ್. ಮೇಸ್ತಾ ಅವರಿಗೆ ಕಾರ್ಯನಿರ್ವಾಹಕ ಅಭಿಯಂತರ (ಸಿವಿಲ್) ಎಂದು ಮುಂಬಡ್ತಿ ಆದೇಶ ನೀಡಲಾಯಿತು. ಹೀಗಾಗಿ ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥವಾಗುವರೆಗೆ ಕಾರ್ಯನಿರ್ವಾಹಕ ಅಭಿಯಂತರ (ಸಿವಿಲ್) ನ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲಾಗುವುದಿಲ್ಲ.

| | |
|---|---|
| ಅನುಕ್ರಮ ಸಂ: 1 | ದಿನಾಂಕ 29–1–2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಂಟನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು. |

ಠರಾವು:

ವಿಸ್ತೃತವಾದ ಚರ್ಚೆಯ ನಂತರ, ಈ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯಲ್ಲಿ ಮತ್ತೊಮ್ಮೆ ಚರ್ಚೆಗಾಗಿ ಹಾಗೂ ಸ್ಥಿರೀಕರಿಸುವುದಕ್ಕಾಗಿ ಮಂಡಿಸಲು ತೀರ್ಮಾನಿಸಲಾಯಿತು.

(ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ: 2 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಎರಡನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಕುರಿತು |

ಠರಾವು:

ದೀರ್ಘ ಚರ್ಚೆಯ ನಂತರ, 97 ಅರ್ಹ ಅಭ್ಯರ್ಥಿಗಳಿಗೆ – *86 ಉಪಸ್ಥಿತಿ* ಮತ್ತು *11 ಅನುಪಸ್ಥಿತಿ* ಯಲ್ಲಿ 2010–'11 ನೇ ಸಾಲಿನ ಸ್ನಾತಕ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಎರಡನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ: 3 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಎರಡನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಕುರಿತು |

ಠರಾವು:

ಚರ್ಚೆಯ ನಂತರ, 59 ಅರ್ಹ ಅಭ್ಯರ್ಥಿಗಳಿಗೆ – *33 ಉಪಸ್ಥಿತಿ* ಮತ್ತು *26 ಅನುಪಸ್ಥಿತಿ* ಯಲ್ಲಿ 2010–'11 ನೇ ಸಾಲಿನ ಸ್ನಾತಕೋತ್ತರ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಎರಡನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ: 4 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಎರಡನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ/ಬಹುಮಾನಗಳನ್ನು ನೀಡುವ ಕುರಿತು |

ಠರಾವು:

ದೀರ್ಘ ಚರ್ಚೆಯ ನಂತರ, 9 ಕೃವಿವಿ ಬಂಗಾರದ ಪದಕಗಳನ್ನು ಅರ್ಹ ಸ್ನಾತಕೋತ್ತರ ಅಭ್ಯರ್ಥಿಗಳಿಗೆ ಹಾಗೂ 3 ಕೃವಿವಿ ಬಂಗಾರದ ಪದಕಗಳನ್ನು, 13 ಖಾಸಗಿ–ವೈಯಕ್ತಿಕ / ಏಜೆನ್ಸಿ ಯ ಬಂಗಾರದ ಪದಕಗಳು, 2

ಖಾಸಗಿ ನಗದು ಬಹುಮಾನ / ಬಹುಮಾನಗಳನ್ನು ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿಯ ಅರ್ಹ ಸ್ನಾತಕ ಅಭ್ಯರ್ಥಿಗಳಿಗೆ ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 5 | **ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ / ಅತ್ಯುತ್ತಮ ರೈತ ವಿಜ್ಞಾನಿ ಪ್ರಶಸ್ತಿಗಳನ್ನು ಹಾಗೂ ಪ್ರೋತ್ಸಾಹ ಧನ ಪಡೆಯುವವರ ಯಾದಿಗೆ ಅನುಮೋದನೆ ಕುರಿತು** |
|---|---|

ಚರ್ಚೆಯ ಸಂದರ್ಭದಲ್ಲಿ, ರೈತ ವಿಜ್ಞಾನಿ ಪ್ರಶಸ್ತಿ ನೀಡುವ ಕುರಿತಾದ ಮಾನ್ಯ ಸದಸ್ಯರಾದ ಶ್ರೀ ಎಂ.ವಿ. ಗುತ್ತೇದಾರ ಅವರ ಪ್ರಶ್ನೆಗೆ ಮಾನ್ಯ ಅಧ್ಯಕ್ಷರು ಉತ್ತರಿಸುತ್ತಾ, ಈ ಉದ್ದೇಶಕ್ಕಾಗಿ ಹಿಂದಿನ ಸಭೆಯಲ್ಲಿ ರಚಿಸಲಾದ ಸಮಿತಿಯು ಸದರಿ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿದವರ ಸ್ಥಳಗಳಿಗೆ ಭೇಟಿ ನೀಡಿತು ಹಾಗೂ ಸ್ಕೋರ್ ಕಾರ್ಡ್ ಪದ್ಧತಿ ಅನುಸಾರ ಶ್ರೀ ಮಲ್ಲೇಶಗೌಡ ಪಾಟೀಲ್, ಮಟ್ಟೂರು, ಲಿಂಗಸೂಗೂರು ತಾಲೂಕು, ರಾಯಚೂರು ಜಿಲ್ಲಾ ಅವರನ್ನು ರೈತ ವಿಜ್ಞಾನಿ ಪ್ರಶಸ್ತಿಗಾಗಿ ಆಯ್ಕೆ ಮಾಡಿತು. ವಿವಿಧ ರೀತಿಯ ಅವಿಷ್ಕಾರಗಳನ್ನು ಸದರಿ ರೈತರು ಅಳವಸಿಕೊಂಡಿರುವುದನ್ನು ಸಹ ಅಧ್ಯಕ್ಷರು ವಿವರವಾಗಿ ಘನ ವೇದಿಕೆಯ ಅವಗಾಹನೆಗೆ ತರುತ್ತಾ ಸದರಿ ಪ್ರಶಸ್ತಿಗಾಗಿ ಅರ್ಹರಾಗಿದ್ದಾರೆಂದು ತಿಳಿಸಿದರು. ತದನಂತರ, ಕೆಲವೊಂದು ಮಾನ್ಯ ಸದಸ್ಯರುಗಳು ರೈತರುಗಳನ್ನು ಪ್ರೇತ್ಸಾಹಿಸುವ ಸಲುವಾಗಿ ರೈತ ವಿಜ್ಞಾನಿ ಪ್ರಶಸ್ತಿಗಾಗಿ ರೈತರ ಸಂಖ್ಯೆಯನ್ನು ಹೆಚ್ಚಿಸಲು ಸಲಹೆ ನೀಡಿದರು. ಸದರಿ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು ಪರಿಗಣಿಸಲಾಯಿತು.

**ಠರಾವು:**

ವಿಸ್ತೃತ ಚರ್ಚೆಯ ನಂತರ, ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ / ಅತ್ಯುತ್ತಮ ರೈತ ವಿಜ್ಞಾನಿ ಪ್ರಶಸ್ತಿಗಳನ್ನು ಹಾಗೂ ಪ್ರೋತ್ಸಾಹ ಧನ ಪಡೆಯುವವರ ಯಾದಿಗೆ ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 6 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹಣಕಾಸು ಸಮಿತಿಯು ಅನುಮೋದಿಸಿ ಶಿಫಾರಸ್ಸು ಮಾಡಿದ ವಿಷಯಗಳಿಗೆ ಅನುಮೋದನೆ ನೀಡುವ ಕುರಿತು** |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಸಿಬ್ಬಂದಿಯವರ ಎಪ್ರೀಲ್–2012 ರ ವೇತನ ನೀಡುವುದನ್ನು ಮಾತ್ರ ಮಾನ್ಯ ಸದಸ್ಯರುಗಳು ಒಪ್ಪಿಗೆ ನೀಡಿರುತ್ತಾರೆ, ಆದರೆ, ಈ ಐಟಂ ನ ಉಳಿದ ಇತರೇ ವಿಷಯಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯಲ್ಲಿ ಚರ್ಚಿಸಲು ಮುಂದೂಡಲಾಯಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 7 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ದೊಡ್ಡ ಪ್ರಮಾಣದ ಸಿವಿಲ್ ಕಾಮಗಾರಿಗಳನ್ನು ಸೆಂಟ್ರಲ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ (ಸಿ.ಪಿ.ಡಬ್ಲ್ಯುಡಿ.) ಹುಬ್ಬಳ್ಳಿ ವಿಭಾಗಕ್ಕೆ ವಹಿಸಿಕೊಡುವ ಕುರಿತು |
|---|---|

ಚರ್ಚೆಯ ಸಂದರ್ಭದಲ್ಲಿ, ಕಾರ್ಯನಿರ್ವಾಹಕ ಅಭಿಯಂತರರು, ಸಿ.ಪಿ.ಡಬ್ಲ್ಯುಡಿ., ಹುಬ್ಬಳ್ಳಿ ಅವರು ಸಿ.ಪಿ.ಡಬ್ಲ್ಯುಡಿ. ನ ಕಾರ್ಯಚಟುವಟಿಕೆಗಳಾದ ಡಿಸೈನ್, ಮೇಲುಸ್ತುವಾರಿ ಮತ್ತು ಸಿವಿಲ್ ಕಾಮಗಾರಿಗಳ ನಿರ್ಮಾಣ ಮತ್ತು ಈಗಾಗಲೇ ನಿರ್ಮಿಸಿದ ವಿವಿಧ ರೀತಿಯ ಸಿವಿಲ್ ಕಾಮಗಾರಿಗಳು, ಕರ್ನಾಟಕ ಹಾಗೂ ಇತರೇ ರಾಜ್ಯಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಪ್ರಸ್ತುತಪಡಿಸಿದರು. ಸಿ.ಪಿ.ಡಬ್ಲ್ಯುಡಿ. ನ ಒಂದು ಕಚೇರಿಯನ್ನು ಸದ್ಯದಲ್ಲೇ ರಾಯಚೂರಿನಲ್ಲಿ ಸ್ಥಾಪಿಸಲು ಯೋಜಿಸಲಾಗಿದೆಯೆಂದು ಅವರು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ರಾಜ್ಯದ ಪೋಲಿಸ್ ಹೌಸಿಂಗ್ ಕಾರ್ಪೋರೇಶನ್ ಅವರಿಗೆ ವಿಶ್ವವಿದ್ಯಾಲಯದ ಸಿವಿಲ್ ಕಾಮಗಾರಿಗಳನ್ನು ನೀಡಲು ಪರಿಗಣಿಸಬೇಕೆಂದು ಸಲಹೆ ನೀಡಿದರು.

**ಠರಾವು:**

ದೀರ್ಘ ಚರ್ಚೆಯ ನಂತರ, ಕೃವಿವಿ ರಾಯಚೂರು ರಾಜ್ಯ ಸರಕಾರದಿಂದ ಅನುದಾನ ಪಡೆಯುವ ಸಂಸ್ಥೆಯಾಗಿರುವುದರಿಂದ ಸಿವಿಲ್ ಕಾಮಗಾರಿಗಳ ಕೈಗೊಳ್ಳಲು ಇಲಾಖಾ ತೆರಿಗೆಯನ್ನು ಯೋಜನಾ ವೆಚ್ಚದ 4.6% ಕ್ಕಿಂತ ಕಡಿಮೆ ಮಾಡಲು ಮಾನ್ಯ ಸದಸ್ಯರುಗಳು ಸಿ.ಪಿ.ಡಬ್ಲ್ಯುಡಿ. ಯವರಿಗೆ ವಿನಂತಿಸಿಕೊಂಡರು. ಈ ಕುರಿತು ಸಿ.ಪಿ.ಡಬ್ಲ್ಯುಡಿ. ನ ಮ್ಯಾನೇಜಿಂಗ್ ಡೈರೆಕ್ಟರ್‌ವರಿಗೆ ಪತ್ರ ಬರೆಯಲು ಅಧ್ಯಕ್ಷರಿಗೆ ಅಧಿಕರಿಸಲಾಯಿತು. ಈ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯಲ್ಲಿ ಚರ್ಚಿಸಲು ಮುಂದೂಡಲು ನಿರ್ಧರಿಸಲಾಯಿತು.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 30-4-2012 | ಸಹಿ /- 30-4-2012 |
|---|---|
| **(ಬಿ.ವಿ. ಪಾಟೀಲ)** | **(ಪಿ. ಬಾಲಕೃಷ್ಣನ್)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಪಿ. ಬಾಲಕೃಷ್ಣನ್)
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.